

## ಕೊರೊನಾ ನಂತರ ಹೆಚ್ಚು ಸುದ್ದಿಯಲ್ಲಿರುವ ‘ಎಚ್‌ಎಂಪಿವಿ’ ನೆಪದಲ್ಲಿ ವೈರಸ್‌ಗಳ ಲೋಕದಲ್ಲೊಂದು ಇಣುಕು ನೋಟ.

ಕಣ್ಣಿಗೆ ಕಾಣಿಸದ, ಕಲ್ಪಿಸಿಕೊಳ್ಳಲೂ ಕಷ್ಟವಾದ, ನಿಕೃಷ್ಟ ಗಾತ್ರದ ವೈರಸ್ ಮನುಷ್ಯನನ್ನು ದುಸ್ವಪ್ನದಲ್ಲೂ ಕಾಡುತ್ತಿದೆ. ಕೊರೊನಾ ನಂತರ ವೈರಸ್ ಎಂದರೆ ವಿಶ್ವ ನಿದ್ದೆಗೆಡುವಂತಾಗಿದೆ. ಮನುಕುಲದ ಇತಿಹಾಸದ ಪುಟಗಳನ್ನು ತೆರೆದು ನೋಡಿದರೆ, ಚಿತ್ರ ವಿಚಿತ್ರ ಹೆಸರುಗಳ ಬೇರೆ ಬೇರೆ ವೈರಸ್‌ಗಳು ಮನುಷ್ಯರನ್ನು ಬೇಟೆಯಾಡುತ್ತಲೇ ಇವೆ. ಹಾಗೆಂದು ವೈರಸ್‌ಗಳ ಕುರಿತು ಆತಂಕಪಡಬೇಕಿಲ್ಲ. ಅವು ತಮ್ಮಷ್ಟಕ್ಕೆ ಮನುಷ್ಯನ ಮೇಲೆ ಎರಗುವುದಿಲ್ಲ. ಮನುಷ್ಯ ಕೈಚಾಚಿದಾಗಷ್ಟೇ ಅವು ಕೈಕುಲುಕುತ್ತವೆ. ಈ ಸೂಕ್ಷ್ಮಜೀವಿಗಳಿಂದ ಮನುಷ್ಯ ಉಪಕೃತನೂ ಹೌದು. ಹುಟ್ಟಿದಾಗಿನಿಂದಲೂ ವೈರಸ್‌ಗಳ ಜೊತೆ ಜೊತೆಗೇ ಮನುಷ್ಯ ಬದುಕಿ ಬಂದಿದ್ದಾನೆ. ವೈರಸ್‌ಗಳ ಲೋಕಕ್ಕೆ ಸಂಬಂಧಿಸಿದ ಈ ಕಥನ, ಇತಿಹಾಸದಿಂದ ವರ್ತಮಾನದಲ್ಲಿ ಕಲಿಯಬೇಕಾದ ಪಾಠಗಳನ್ನು ನಮಗೆ ಸೂಚಿಸುವಂತಿದೆ.

■ ಗುರುರಾಜ್ ಎಸ್. ದಾವಣಗೆರೆ